ಹಣದಿಂದ ರೂ. 17.88 ಕೋಟಿಗಳನ್ನು ಫೆಬ್ರವರಿ 97ರಲ್ಲಿ ನಿಗದಿಪಡಿಸಿದೆ. ಇಲ್ಲಿಯವರೆಗೆ ರೂ. 3129.28 ಲಕ್ಷಗಳನ್ನು ಬಿಡುಗಡೆಯಾಗಿದೆ.

ಆ) ಹಾಸನ ಜಿಲ್ಲೆಯ ಗುರಿ ಮತ್ತು ಸಾಧನೆಯ ವಿವರ ಹಾಗೂ ನಿಗದಿಪಡಿಸಿರುವ ಹಣ ಮತ್ತು ವೆಚ್ಚ ಈ ಕೆಳಕಂಡಂತಿರುತ್ತದೆ.

(ರೂ. ಲಕ್ಷಗಳಲ್ಲಿ)

ಭೌತಿಕಗುರಿ		ಆರ್ಥಿಕ ಗುರಿ	ಭೌತಿಕ ಸಾಧನೆ		ವೆಚ್ಚ
ಫಲಾನುಭವಿಗಳು	ಘಟಕಗಳು		ಫಲಾನುಭವಿಗಳು	ಘಟಕಗಳು	
750	90	161.00	705	125	36.68

1996-97ನೇ ಆಯವ್ಯಯ ಭಾಷಣದಲ್ಲಿ 1500 ಘಟಕಗಳಲ್ಲಿ ಸಮುದಾಯ ನೀರಾವರಿ ಯೋಜನೆ ಕೈಗೊಳ್ಳಬೇಕೆಂದಿದೆ. ಅದರಂತೆ 2073 ಘಟಕಗಳಲ್ಲಿ ಗಂಗಾ ಕಲ್ಯಾಣ ಯೋಜನೆಯನ್ನು ಕೈಗೊಳ್ಳಲಾಗಿದೆ.

ಮೈಸೂರು ನಗರದಲ್ಲಿ ಮಕ್ಕಾಜಿ ಚೌಕ ನಿರ್ಮಾಣ.

833 - ಶ್ರೀ ಹೆಚ್.ಎನ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದ ಮಕ್ಕಾಜಿ ಚೌಕ ನಿರ್ಮಾಣದ ಬಗ್ಗೆ ವಿಳಂಬಕ್ಕೆ ಕಾರಣವೇನು?

ಆ) ಇದುವರೆಗೆ ಈ ಕಾರಣಕ್ಕಾಗಿ ಮಳಿಗೆಯವರಿಗೆ ಇತರರಿಗೆ ಸ್ಥಳ ಸ್ವಾಧೀನಪಡಿಸಿಕೊಳ್ಳುವ ಕುರಿತು ಪರಿಹಾರವಾಗಿ ಎಷ್ಟು ಹಣ ನೀಡಲಾಗಿದೆ (ಸಂಪೂರ್ಣ ವಿವರ ನೀಡುವುದು).

ಇ) ಇದಕ್ಕಾಗಿ ಸ್ಥಳವನ್ನು ಸ್ವಾಧೀನಪಡಿಸಿ ಕೊಳ್ಳಲಾಗಿದೆಯೇ?

ಈ) ಇಲ್ಲದಿದ್ದಲ್ಲಿ ಕಾರಣಗಳೇನು, ಮಕ್ಕಾಜಿ ಚೌಕ ನಿರ್ಮಾಣ ಕಾರ್ಯ ಎಂದು ಪ್ರಾರಂಭವಾಗುವುದು?

ಶ್ರೀ ಮೀರಾಜುದ್ದೀನ್ ಪಟೇಲ್ (ಪೌರಾಡಳಿತ ರಾಜ್ಯ ಸಚಿವರು) :

ಅ) ಭೂ ಸ್ವಾಧೀನ ಪ್ರಕರಣದಲ್ಲಿ ಕೆಲವು ತೊಡಕುಗಳು ಹಾಗೂ ಸ್ವಾಧೀನ ಪಡಿಸಿಕೊಂಡ ಅಂಗಡಿಯವರಿಗೆ ಪರ್ಯಾಯದ ವ್ಯವಸ್ಥೆ ಮಾಡದೆ ಇರುವುದರಿಂದ ವಿಳಂಬವಾಗಿದೆ.

ಆ) ಮೊದಲನೇ ಹಂತದಲ್ಲಿ 117 ಮಳಿಗೆಗಳಿಗೆ ರೂ. 7.62 ಲಕ್ಷಗಳನ್ನು ನೀಡಿದೆ.

2ನೇ ಹಂತದಲ್ಲಿ 12 ಮಳಿಗೆಗಳಿಗೆ ರೂ. 1.48 ಕೋಟಿಗಳನ್ನು ನೀಡಿದೆ. (ವಿವರ ಲಗತ್ತಿಸಿದೆ.)

ಇ) ಮಹಾನಗರ ಪಾಲಿಕೆ ಸದರಿ ಜಾಗವನ್ನು ಸ್ವಾಧೀನ ಪಡಿಸಿಕೊಂಡಿದೆ. ಆದರೆ, ಕಬ್ಜಾ ಇನ್ನೂ ವಹಿಸಿಕೊಟ್ಟಿರುವುದಿಲ್ಲ.

ಈ) ಭೂ ಸ್ವಾಧೀನಕ್ಕೆ ಸಂಬಂಧಿಸಿದ ತೊಡಕುಗಳು ನಿವಾರಣೆಗೊಂಡ ತಕ್ಷಣ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 1.58ಕ್ಕೆ ಏವರ

ಮೈಸೂರು ನಗರದ ಮಧ್ಯಭಾಗದಲ್ಲಿರುವ ಕೃಷ್ಣರಾಜೇಂದ್ರ ವೃತ್ತದ ಸರ್ ಎಂ. ವಿಶ್ವೇಶ್ವರಯ್ಯ ಭವನ ಹಿಂಭಾಗ (ಮಕ್ಕಾಜಿ ಚೌಕ್) ದಲ್ಲಿ ವಿನೋಬ ರಸ್ತೆ ಗಾಂಧಿ ಚೌಕ್ ಮತ್ತು ರಂಗಾಚಾರ್ಲು ಪುರಭವನಕ್ಕೆ ಹೊಂದಿಕೊಂಡಂತೆ ನಗರಪಾಲಿಕೆ ವತಿಯಿಂದ ಪ್ರತಿಷ್ಠಿತ ನಗರ ಕೇಂದ್ರ ವಾಣಿಜ್ಯ ಸಂಕೀರ್ಣವನ್ನು ಹೊಂದಿಕೊಂಡಂತೆ ನಗರಪಾಲಿಕೆ ವತಿಯಿಂದ ಪ್ರತಿಷ್ಠಿತ ನಗರ ಕೇಂದ್ರ ವಾಣಿಜ್ಯ ಸಂಕೀರ್ಣವನ್ನು ಸುಮಾರು 1,23,074 ಚದರ ಅಡಿಗಳ ವಿಸ್ತಾರವಾದ ಪ್ರದೇಶದಲ್ಲಿ ನಿರ್ಮಿಸಲಾಗುವುದು.

ಸದರಿ ಕಾಮಗಾರಿಗಳನ್ನು ಕೈಗೊಳ್ಳುವ ಮುನ್ನ ವಾಣಿಜ್ಯ ಚಟುವಟಿಕೆಗಳನ್ನು ನಡೆಸುತ್ತಿರುವ 129 ಮಳಿಗೆಗಳನ್ನು ಸ್ವಾಧೀನಪಡಿಸಿಕೊಳ್ಳಬೇಕಾಗಿದ್ದಿತು. ಇದಕ್ಕಾಗಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವನ್ನು ಕೋರಲಾಗಿ ನಗರಾಪಾಲಿಕೆಯ ಪರವಾಗಿ ಭೂ ಸ್ವಾಧೀನ ಕಾರ್ಯಗಳನ್ನು ಕೈಗೊಂಡಿರುತ್ತಾರೆ.

ಭೂಸ್ವಾಧೀನ ನಡವಳಿಕೆಗಳನ್ನು ಎರಡು ಮುಖ್ಯ ಭಾಗಗಳನ್ನಾಗಿ ಕೈಗೊಂಡು ಮೊದಲು 50,209 ಚದರ ಅಡಿಗಳ 117 ಮಳಿಗೆಗಳ ಭೂಸ್ವಾಧೀನ ಕಾರ್ಯವನ್ನು ನಗರಾಭಿವೃದ್ಧಿ ಪ್ರಾಧಿಕಾರವು ಪೂರ್ಣಗೊಳಿಸಿದ್ದು, ಪರಿಹಾರದ ಹಣವನ್ನು ವಿತರಿಸಿರುತ್ತಾರೆ. ಆದರೆ ಇದುವರೆಗೆ ನಗರಪಾಲಿಕೆಗೆ ಹಸ್ತಾಂತರಿಸಿರುವುದಿಲ್ಲ.

ಎರಡನೇ ಹಂತದಲ್ಲಿ ಉಳಿದ 7,445.75 ಚದರ ಅಡಿಗಳ 12 ಮಳಿಗೆಗಳ ಭೂ ಸ್ವಾಧೀನಕ್ಕೆ ಆಗುವ ಪರಿಹಾರದ ಮೊತ್ತ 1,48,78,542 ರೂಪಾಯಿಗಳಲ್ಲಿ ನಿವೇಶನದ ಬೆಲೆ, ಕಟ್ಟಡಗಳ ಮೌಲ್ಯ, ಶಾಸನಬದ್ಧ ಭತ್ಯೆ ಕಾನೂನು ಪ್ರಕಾರ ಪಾವತಿಮಾಡಬೇಕಾದ ಬಡ್ಡಿ ಹಾಗೂ ಹೆಚ್ಚುವರಿ ಮಾರುಕಟ್ಟೆ ದರ ಎಲ್ಲವೂ ಒಳಗೊಂಡಿರುತ್ತದೆ.

ನಗರ ಪಾಲಿಕೆಯ ಆಯುಕ್ತರು 12 ಅಂಗಡಿ ಮಳಿಗೆಗಳ ಮಾಲೀಕರೊಡನೆ ಕರಾರು ಮಾಡಿಕೊಂಡು ಕರಾರಿನಲ್ಲಿ ಇರುವ ಅಂಶಗಳಂತೆ ಭೂಸ್ವಾಧೀನಪಡಿಸಿಕೊಂಡು ಸ್ವತ್ತುಗಳನ್ನು ನಗರಪಾಲಿಕೆಗೆ ವಹಿಸುವಂತೆ ಭೂಸ್ವಾಧೀನಾಧಿಕಾರಿಗಳಿಗೆ ತಿಳಿಸಿರುತ್ತಾರೆ. ಕರಾರಿನ ಪ್ರಮುಖ ಅಂಶಗಳನ್ನು ಅಂಗಡಿ ಮಳಿಗೆಗಳಲ್ಲಿರುವ ಬಾಡಿಗೆದಾರರಿಗೆ ಪುನರ್ವಸತಿ ನೀಡಲು ಅನೆಕ್ಸ್ ಕಟ್ಟಡ ನಿರ್ಮಿಸಲಾಗುತ್ತಿದೆ ಎಂದೂ ಆದುದರಿಂದ ಬಾಡಿಗೆ ದಾರರನ್ನು ಪುನರ್ವಸತಿ ಆದ ಮೇಲೆಯೇ ಅಂಗಡಿಗಳಿಂದ ಬಿಡಸಬೇಕೆಂದಿರುತ್ತದೆ.

ಈ ಕರಾರಿನಂತೆ ದಿನಾಂಕ 31-3-93ರವರೆಗೆ ಮಹಾನಗರ ಪಾಲಿಕೆಯು ಯಾವುದೇ ಬಡ್ಡಿಯನ್ನು ಭೂ ಮಾಲೀಕರಿಗೆ ನೀಡಬೇಕಾಗಿಲ್ಲವೆಂತಲೂ, ಒಂದು ವೇಳೆ ಮಹಾನಗರ ಪಾಲಿಕೆಯು ಅವಾರ್ಡು ಮೊಬಲಗನ್ನು ಪಾವತಿ ಮಾಡದೇ ಹೋದಲ್ಲಿ ಉಳಿದಿರುವ ಮೊಬಲಗಿಗೆ ಭೂಸ್ವಾಧೀನ ಕಾಯ್ದೆಯ ಪ್ರಕಾರ ಬಡ್ಡಿಯನ್ನು ಪಾವತಿಮಾಡಬೇಕಾಗುತ್ತದೆಂದು ಎರಡು ಪಕ್ಷದವರು ಒಪ್ಪಿಕೊಂಡಿರುತ್ತಾರೆ. ದಿನಾಂಕ31-3-93ರ ನಂತರ ಪಾವತಿ ಆಗಿರುವ ಹಣಕ್ಕೆ ಮಹಾನಗರ ಪಾಲಿಕೆಯ ಭೂ ಮಾಲೀಕರಿಗೆ ಬಡ್ಡಿಯನ್ನು ವಿತರಿಸಲು ವಿಶೇಷ ಭೂಸ್ವಾಧೀನಾಧಿಕಾರಿಯವರಿಗೆ ಹಣವನ್ನು ಬಿಡುಗಡೆ ಮಾಡಿರುತ್ತದೆ. ಸರ್ಕಾರದ ನಿರ್ದೇಶನ ಹಾಗೂ ಪಾಲಿಕೆ ಕೋರಿರುವಂತೆ ಈ 12 ಮಳಿಗೆಗಳ ಸುಪರ್ದನ್ನು ಯಥಾಸ್ಥಿತಿಯಲ್ಲಿ ನಗರಪಾಲಿಕೆಯ ಕಂದಾಯಾಧಿಕಾರಿಗಳಿಗೆ ದಿನಾಂಕ 6-5-94 ರಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ವಹಿಸಿಕೊಟ್ಟಿರುತ್ತದೆ.

ಈ ಮಕ್ಕಾಜಿ ಚೌಕದ ಯೋಜನೆಗಾಗಿ ಸ್ವಾಧೀನಪಡಿಸಿಕೊಳ್ಳುವ ಮಳಿಗೆಗಳ ಬಾಡಿಗೆದಾರರ ಪುನರ್ವಸತಿ ಯೋಜನೆ ಆದ ಮಕ್ಕಾಜಿ ಚೌಕ ಆಸೆಕ್ಸ್ ವಾಣಿಜ್ಯ ಸಂಕೀರ್ಣವು ಪುನರ್ವಸತಿ ಉದ್ದೇಶಕ್ಕಾಗಿ ನಿರ್ಮಿಸಲಾಗುವುದು. ಸ್ವಾಧೀನ ಪಡಿಸಿಕೊಳ್ಳುವ ಮಳಿಗೆಗಳ ಹಾಲಿ ಬಾಡಿಗೆದಾರರನ್ನು ಅವಕಾಶ ಮಾಡಿಕೊಡಲಾಗಿದೆ. ಸದರಿ ಜಾಗದಲ್ಲಿ ವ್ಯಾಪಾರ ನಿರತರಾಗಿರುವವರಿಗೆ ಬೇರೆ ವಸತಿ ಸೌಕರ್ಯ ಏರ್ಪಡಿಸಿದ ನಂತರ ಅವರನ್ನು ತೆರವು ಮಾಡಲು ಕ್ರಮಕೈಗೊಳ್ಳಲಾಗುತ್ತದೆ.

ಮಹಾನಗರ ಪಾಲಿಕೆ ವತಿಯಿಂದ ಪೂರ್ಣ ರೂಪದಲ್ಲಿ ಬಹು ವರ್ಷಗಳ ಹಿಂದೆ ಅಂದರೆ 1972-74 ವರ್ಷದಲ್ಲಿ 117 ಭೂಸ್ವಾಧೀನ ಪರಿಹಾರಾರ್ಥ 7.62 ಲಕ್ಷ ರೂಪಾಯಿ ಬಿಡುಗಡೆಯಾಗಿರುತ್ತದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಇದುವರೆಗೆ ಕೇವಲ12 ಮಳಿಗೆಗಳನ್ನು ನಗರಪಾಲಿಕೆಯ ಕಂದಾಯಾಧಿಕಾರಿಗಳಿಗೆ ವಹಿಸಿದ್ದು, ಉಳಿಕೆ117 ಮಳಿಗೆಗಳನ್ನು ಹಸ್ತಾಂತರಿಸಲು ಕ್ರಮ ಕೈಗೊಳ್ಳುತ್ತೇವೆಂದು ತಿಳಿಸಿರುತ್ತಾರೆ.

ಮಕ್ಕಾಜಿ ಚೌಕದ 12 ಮಳಿಗೆಳ ಭೂ ಪರಿಹಾರದ ಮೊಬಲಗು 1,48,7805-00 ರೂಪಾಯಿಗಳನ್ನು ವಿಶೇಷ ಭೂ ಸ್ವಾಧೀನಾಧಿಕಾರಿಗಳ ನಡವಳಿಕೆಗಳ ಪ್ರಕಾರ ಪಾವತಿಯಾಗಿರುತ್ತದೆ.

ಮೈಸೂರು ನಗರಪಾಲಿಕೆ ಅಭಿವೃದ್ಧಿ ಕಾರ್ಯಗಳು

834 - ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರಪಾಲಿಕೆಯಲ್ಲಿ ಹಣಕಾಸಿನ ಮುಗ್ಗಟ್ಟಿನಿಂದ ಯಾವುದೇ ಅಭಿವೃದ್ಧಿ ಕಾರ್ಯಗಳು ಸಮರ್ಪಕ ರೀತಿಯಲ್ಲಿ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?